**2013ರ ಕರ್ನಾಟಕ ಅಧಿನಿಯಮ ಸಂಖ್ಯೆ : 33**
**ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013**
**ಪ್ರಕರಣಗಳ ಪಟ್ಟಿ**

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**
**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕಬ್ಬು ನಿಯಂತ್ರಣ ಮಂಡಲಿ
4. ಮಂಡಲಿಯ ಪ್ರಕಾರ್ಯಗಳು
5. ಕಾರ್ಖಾನೆಗಳಲ್ಲಿ ಬಳಸಲು ಸೂಕ್ತವಲ್ಲದ ಕಬ್ಬಿನ ತಳಿಗಳನ್ನು ಘೋಷಿಸುವ ಅಧಿಕಾರಗಳು
6. ಕೆಲವು ಬಗೆಯ ಕಬ್ಬಿನ ತಳಿಗಳ ಬಿತ್ತನೆ ಬೀಜಗಳ ವಿತರಣೆಯ ನಿಷೇಧ
7. ಮೀಸಲು ಪ್ರದೇಶದಲ್ಲಿ ಕಬ್ಬಿನ ಖರೀದಿ
8. ತೂಕ
9. ಕಬ್ಬು ಬೆಳೆಗಾರರಿಗೆ ಹಣ ಸಂದಾಯ
10. ದಂಡ
11. ಅಪರಾಧದ ಸಂಜ್ಞೇಯತೆ
12. ಅಪರಾಧಗಳನ್ನು ರಾಜಿ ಮಾಡಲು ಅಧಿಕಾರ
13. ಕಂಪೆನಿಗಳು, ಫರ್ಮ್‌ಗಳು ಹಾಗೂ ಪಾಲುದಾರಿಕೆಗಳಿಂದ ಅಪರಾಧಗಳು
14. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸಾರ್ವಜನಿಕ ನೌಕರರಾಗಿರುವುದು
15. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
16. ನಿಯಮಗಳನ್ನು ರಚಿಸುವ ಅಧಿಕಾರ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**2013ರ ಅಧಿನಿಯಮ ಸಂಖ್ಯೆ 33.–** ರಾಜ್ಯದಲ್ಲಿ ಕಬ್ಬಿನ ಖರೀದಿ ಮತ್ತು ಸರಬರಾಜು ನಿಯಂತ್ರಿಸಲು ಒಂದು ಶಾಸನವನ್ನು ರಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಈ ವಿಧೇಯಕದ ಮುಖ್ಯ ಲಕ್ಷಣಗಳೆಂದರೆ,–

(1) ರಾಜ್ಯ ಕಬ್ಬು ಖರೀದಿ ಹಾಗೂ ಸರಬರಾಜಿಗೆ ಸಂಬಂಧಿಸಿದಂತೆ ಸಲಹೆ ನೀಡಲು ಕಬ್ಬು ನಿಯಂತ್ರಣ ಮಂಡಲಿಯ ರಚನೆ;

(2) ಸೂಕ್ತವಲ್ಲದ ಕಬ್ಬಿನ ತಳಿಗಳ ಬಿತ್ತನೆಯ ಬೀಜಗಳ ವಿತರಣೆಯ ಮತ್ತು ಬಿತ್ತನೆ ಮಾಡುವುದರ ನಿಷೇಧ;

(3) ಮೀಸಲು ಪ್ರದೇಶದಲ್ಲಿ ಕಬ್ಬಿನ ಖರೀದಿ;

(4) ಗೊತ್ತು ಪಡಿಸಿದ ಕಾಲದೊಳಗಾಗಿ ಕಬ್ಬು ಬೆಳೆಗಾರರಿಗೆ ಹಣ ಸಂದಾಯ; ಮತ್ತು

(5) ಕೆಲವು ಇತರ ಆನುಷಂಗಿಕ ವಿಷಯಗಳಿಗಾಗಿ ಉಪಬಂಧಿಸುವುದು.

ಆದ್ದರಿಂದ, ಈ ವಿಧೇಯಕ.

(2013ರ ವಿಧಾನಪರಿಷತ್ತಿನ ವಿಧೇಯಕ ಸಂಖ್ಯೆ:09, ಕಡತ ಸಂಖ್ಯೆ:ಸಂವ್ಯಶಾಇ 14 ಶಾಸನ 2013)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 14, 24 ಹಾಗೂ 27ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## II

**2014ರ ತಿದ್ದುಪಡಿ ಅಧಿನಿಯಮ ಸಂಖ್ಯೆ 28.–** ಈ ಮುಂದಿನವುಗಳಿಗೆ, ಎಂದರೆ:–

(ಎ) ಈ ಮುಂದಿನ ಪದಗಳನ್ನು ಪರಿಭಾಷಿಸಲು, ಎಂದರೆ:–

(i) ಹೆಚ್ಚುವರಿ ಕಬ್ಬು ಬೆಲೆ;

(ii) ನ್ಯಾಯ ಮತ್ತು ಲಾಭದಾಯಕ ಬೆಲೆ; ಮತ್ತು

(iii) ವರ್ಷ.

(ಬಿ) ರಾಜ್ಯದ ಎಲ್ಲಾ ಕಂದಾಯ ವಿಭಾಗಗಳನ್ನು ಪ್ರತಿನಿಧಿಸುವ ಕಬ್ಬು ಬೆಳೆಗಾರರು ಮತ್ತು ಕಬ್ಬು ಕಾರ್ಖಾನೆಯ ಮಾಲೀಕರಿಗೆ ಸಮನಾದ ಪ್ರಾತಿನಿಧ್ಯವನ್ನು ನೀಡುವುದಕ್ಕಾಗಿ ಕಬ್ಬು ನಿಯಂತ್ರಣ ಮಂಡಲಿಯನ್ನು ಪುನರ್‌ರಚಿಸಲು;

(ಸಿ) ವ್ಯಕ್ತಿಗಳಿಗೆ, ಸಮನು ನೀಡುವುದು, ದಸ್ತಾವೇಜುಗಳು ಇತ್ಯಾದಿಗಳನ್ನು ಹುಡುಕುವಂಥ ತಮ್ಮ ಪ್ರಕಾರ್ಯಗಳನ್ನು ನೆರವೇರಿಸುವ ವಿಷಯಗಳಲ್ಲಿ ವಿಚಾರಣೆಯನ್ನು ನಡೆಸುವುದಕ್ಕೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಕಬ್ಬು ನಿಯಂತ್ರಣ ಮಂಡಲಿಗೆ ನೀಡಲು;

(ಡಿ) ಕಬ್ಬು ನಿಯಂತ್ರಣ ಮಂಡಲಿಯ ತೀರ್ಮಾನದ ಮೇಲೆ ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಹೆಚ್ಚುವರಿ ಕಬ್ಬು ಬೆಲೆಯನ್ನು ಘೋಷಿಸಲು;

(ಇ) ಸಕ್ಕರೆ ಕಾರ್ಖಾನೆಯಲ್ಲಿ ವಾಸ್ತವಿಕ ಪ್ರಾಪ್ತಿಯನ್ನು (actual realization) ಲೆಕ್ಕಹಾಕುವುದಕ್ಕಾಗಿ ತಜ್ಞ ಸಮಿತಿಯನ್ನು ರಚಿಸಲು;

(ಎಫ್) ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ, ಕಬ್ಬಿನ ವಾಸ್ತವಿಕ, ಇಳುವರಿ ಸಕ್ಕರೆಯ ಪ್ರಾಪ್ತಿ ಮತ್ತು ಕಬ್ಬಿನ ಸಿಪ್ಪೆ, ಪ್ರೆಸ್–ಮಡ್ ಮತ್ತು ಕಾಕಂಬಿ ಹಾಗೂ ಎಥೆನಾಲ್ ಅಥವಾ ಸಕ್ಕರೆಯನ್ನು ಉತ್ಪಾದಿಸದೇ ಕಬ್ಬಿನ ರಸದಿಂದ ನೇರವಾಗಿ ಉತ್ಪಾದಿಸಲಾದ ಇತರ ಉತ್ಪಾದನೆಗಳನ್ನು ಪರಿಗಣಿಸಲು;

(ಜಿ) ಎರಡು ಹಂತಗಳಲ್ಲಿ ಕಬ್ಬು ಬೆಲೆಯನ್ನು ಪಾವತಿಸಲು, ಎಂದರೆ:–

(i) ಮೊದಲ ಹಂತದಲ್ಲಿ, ಕಬ್ಬಿನ ಸರಬರಾಜಿಗೆ, ಹಿಂದಿನ ವರ್ಷಗಳ ಇಳುವರಿಯ ಆಧಾರದ ಮೇಲೆ ನ್ಯಾಯ ಮತ್ತು ಲಾಭದಾಯಕ ಬೆಲೆಯ ಪಾವತಿಸುವುದು; ಮತ್ತು

(ii) ಎರಡನೇ ಹಂತದಲ್ಲಿ, ಸಕ್ಕರೆ ಕಾರ್ಖಾನೆಯಲ್ಲಿ ವಾಸ್ತವಿಕ ಪ್ರಾಪ್ತಿಯ ಮೇಲೆ ನಿರ್ಧರಿಸಲಾದ ಆದಾಯ ಹಂಚಿಕೆ ಆಧಾರದ ಮೇಲೆ ಕಬ್ಬಿನ ಹೆಚ್ಚುವರಿ ಬೆಲೆಯನ್ನು ಪಾವತಿಸುವುದು.

(ಹೆಚ್) ಹೆಚ್ಚುವರಿ ಕಬ್ಬು ಬೆಲೆಯ ಬಾಕಿಯನ್ನು ಭೂ ಕಂದಾಯದ ಹಿಂಬಾಕಿಯಂತೆ ವಸೂಲಿ ಮಾಡಲು;

(ಐ) ಕೆಲವು ಇತರ ಪ್ರಾಸಂಗಿಕ ತಿದ್ದುಪಡಿಗಳನ್ನೂ ಸಹ ಮಾಡಲು,

– ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2014ರ ವಿಧಾನಸಭೆಯ ವಿಧೇಯಕ ಸಂಖ್ಯೆ 44:, ಕಡತ ಸಂಖ್ಯೆ:ಸಂವ್ಯಶಾಇ 23 ಶಾಸನ 2014)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 14, 24, ಮತ್ತು 27ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

---

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ : 33**

(2013ರ ಮಾರ್ಚ್ ಹನ್ನೆರಡನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013**

(2013ರ ಮಾರ್ಚ್ ಎಂಟನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

(2014ರ ತಿದ್ದುಪಡಿ ಅಧಿನಿಯಮ ಸಂಖ್ಯೆ 28 ರಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಲ್ಲಿ ಬಳಕೆಗೆ ಅಗತ್ಯವಾದ ಕಬ್ಬಿನ ಖರೀದಿ ಮತ್ತು ಸರಬರಾಜನ್ನು ನಿಯಂತ್ರಿಸಲು ಒಂದು ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಲ್ಲಿ ಬಳಕೆಗೆ ಅಗತ್ಯವಾದ ಕಬ್ಬಿನ ಖರೀದಿ ಮತ್ತು ಸರಬರಾಜನ್ನು ನಿಯಂತ್ರಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

[2][(ಎ) "ಹೆಚ್ಚುವರಿ ಕಬ್ಬು ಬೆಲೆ" ಎಂದರೆ, ಮಂಡಲಿಯ ತೀರ್ಮಾನದ ಆಧಾರದ ಮೇಲೆ, 4ಎ ಪ್ರಕರಣದ ಅಡಿಯಲ್ಲಿ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಂದ ಘೋಷಿಸಲ್ಪಟ್ಟ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಕಾರ್ಖಾನೆಯ ಅಧಿಭೋಗದಾರನು ಒಪ್ಪಿಸಲಾದ ಕಬ್ಬಿಗಾಗಿ ಕಬ್ಬು ಬೆಳೆಗಾರನಿಗೆ ಸಂದಾಯಮಾಡಲಾದ ಹೆಚ್ಚುವರಿ ಬೆಲೆ][2]

([1][ಎಎ][1]) "ಮಂಡಲಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕಬ್ಬು ನಿಯಂತ್ರಣ ಮಂಡಲಿ;

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಮರುಸಂಖ್ಯೆ ನೀಡಲಾಗಿದೆ.
2. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಸೇರಿಸಲಾಗಿದೆ.

(ಬಿ) "ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು" ಎಂದರೆ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರವು ನೇಮಕ ಮಾಡಿದ ಅಧಿಕಾರಿ;

(ಸಿ) "ಕಬ್ಬು ಅರೆಯುವ ಹಂಗಾಮು" ಎಂದರೆ, ರಾಜ್ಯ ಸರ್ಕಾರವು ಮಂಡಳಿಯ ಸಮಾಲೋಚನೆಯೊಂದಿಗೆ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಸಾಮಾನ್ಯವಾಗಿ ಕಬ್ಬನ್ನು ಅರೆಯುವಂತಹ ಅವಧಿ;

(ಡಿ) "ಜಿಲ್ಲಾಧಿಕಾರಿ" ಎಂದರೆ, ಸಂಬಂಧಪಟ್ಟ ಕಂದಾಯ ಜಿಲ್ಲೆಯ ಜಿಲ್ಲಾಧಿಕಾರಿ;

(ಇ) "ಕಾರ್ಖಾನೆ" ಎಂದರೆ, ಸಕ್ಕರೆ ಉತ್ಪಾದನೆಗೆ ಸಂಬಂಧಿಸಿದ ಯಾವುದೇ ತಯಾರಿಕಾ ಪ್ರಕ್ರಿಯೆಯು ವಿದ್ಯುಚ್ಛಕ್ತಿಯ ಸಹಾಯದೊಂದಿಗೆ ನಡೆಯುತ್ತಿರುವ ಅಥವಾ ಸಾಮಾನ್ಯವಾಗಿ ನಡೆಸುತ್ತಿರುವ ಹಿಂದಿನ ಹನ್ನೆರಡು ತಿಂಗಳುಗಳ ಯಾವುದೇ ದಿನದಲ್ಲಿ ಮತ್ತು ಅದರ ಯಾವುದೇ ಭಾಗದಲ್ಲಿ ಇಪ್ಪತ್ತು ಅಥವಾ ಅದಕ್ಕಿಂತ ಹೆಚ್ಚು ಕೆಲಸಗಾರರು ಕಾರ್ಯನಿರ್ವಹಿಸುತ್ತಿರುವ ಅಥವಾ ಕಾರ್ಯನಿರ್ವಹಿಸಿರುವ, ಸಕ್ಕರೆ ಕಾರ್ಖಾನೆ;

[1][(ಇಎ) "ಕಬ್ಬಿನ ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್ಆರ್‌ಪಿ)" ಎಂದರೆ, ಒಪ್ಪಿಸಲಾದ ಕಬ್ಬಿಗಾಗಿ, ಆ ವರ್ಷಕ್ಕಾಗಿ, ಕಬ್ಬು (ನಿಯಂತ್ರಣ) ಆದೇಶ, 1966ರ 3ನೇ ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿದ ಬೆಲೆ][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಸೇರಿಸಲಾಗಿದೆ.

(ಎಫ್) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಜಿ) "ಖಂಡಸಾರಿ ಸಕ್ಕರೆ ತಯಾರಿಕಾ ಘಟಕ" ಎಂದರೆ, ತೆರೆದ ಕೊಪ್ಪರಿಗೆಯ ಪ್ರಕ್ರಿಯೆ ಮೂಲಕ ಯಾವುದೇ ಯಾಂತ್ರಿಕ ಶಕ್ತಿಯಿಂದ ನಡೆಯುತ್ತಿರುವ, ಗಾಣದ ನೆರವಿನೊಂದಿಗೆ ಖಂಡಸಾರಿ ಸಕ್ಕರೆ ತಯಾರಿಕೆ ಅಥವಾ ಉತ್ಪಾದನೆಯಲ್ಲಿ ತೊಡಗಿದ ಅಥವಾ ಸಾಮಾನ್ಯವಾಗಿ ತೊಡಗಿದ ಒಂದು ಘಟಕ;

(ಎಚ್) "ಕಾರ್ಖಾನೆಯ ಅಧಿಭೋಗದಾರ" ಎಂದರೆ, ಕಾರ್ಖಾನೆಯ ಅಥವಾ ಖಂಡಸಾರಿ ಸಕ್ಕರೆ ತಯಾರಿಕಾ ಘಟಕದ ವ್ಯವಹಾರಗಳ ಮೇಲೆ ನಿಯಂತ್ರಣ ಹೊಂದಿರುವ ವ್ಯಕ್ತಿ ಹಾಗೂ ಸದರಿ ವ್ಯವಹಾರಗಳನ್ನು ವ್ಯವಸ್ಥಾಪನಾ ಏಜೆಂಟನಿಗೆ ವಹಿಸಿದ್ದಲ್ಲಿ, ಅಂತಹ ಏಜೆಂಟ್;

(ಐ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರೂಪಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಜೆ) "ಮೀಸಲು ಪ್ರದೇಶ" ಎಂದರೆ, ಕಬ್ಬು (ನಿಯಂತ್ರಣ) ಆದೇಶ, 1966ರ ಮೇರೆಗೆ ಅಧಿಸೂಚಿಸಲಾದ ಪ್ರದೇಶ;

(ಕೆ) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ;

(ಎಲ್) "ಕಬ್ಬು" ಎಂದರೆ, ಸಕ್ಕರೆ ಕಾರ್ಖಾನೆಯಲ್ಲಿ ಅಥವಾ ಖಂಡಸಾರಿ ಸಕ್ಕರೆ ತಯಾರಿಕಾ ಘಟಕದಲ್ಲಿ ಬಳಸಲು ಉದ್ದೇಶಿಸಲಾದ ಕಬ್ಬು;

(ಎಂ) "ಕಬ್ಬು ಬೆಳೆಗಾರ" ಎಂದರೆ, ಸ್ವತ: ತಾನೆ ಆಗಲಿ ಅಥವಾ ತನ್ನ ಕುಟುಂಬದ ಸದಸ್ಯರ ಮೂಲಕವಾಗಲಿ ಅಥವಾ ಕೂಲಿ ಕಾರ್ಮಿಕರ ಮೂಲಕವಾಗಲಿ ಕಬ್ಬನ್ನು ಬೆಳೆಯುವ ಗೇಣಿದಾರನನ್ನು ಒಳಗೊಂಡಂತೆ ಒಬ್ಬ ವ್ಯಕ್ತಿ.

[1][(ಎನ್) "ವರ್ಷ" ಎಂದರೆ, ಜುಲೈ ಮೊದಲನೇ ದಿನದಂದು ಪ್ರಾರಂಭವಾಗಿ ಮುಂಬರುವ ವರ್ಷದ ಜೂನ್ ಮೂವತ್ತಕ್ಕೆ ಕೊನೆಗೊಳ್ಳುವ ವರ್ಷ.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಪ್ರತಿಯೋಜಿಸಲಾಗಿದೆ.

**3. ಕಬ್ಬು ನಿಯಂತ್ರಣ ಮಂಡಲಿ.–** (1) ರಾಜ್ಯ ಸರ್ಕಾರವು ಈ ಅಧಿನಿಯಮ ಪ್ರಾರಂಭವಾದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಈ ಅಧಿನಿಯಮದಲ್ಲಿ ವಹಿಸಲಾದಂಥ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಕಬ್ಬು ನಿಯಂತ್ರಣ ಮಂಡಲಿಯನ್ನು (ಇಲ್ಲಿ ಇನ್ನು ಮುಂದೆ ಮಂಡಲಿಯೆಂದು ಉಲ್ಲೇಖಿಸಲಾಗಿದೆ) ರಚಿಸತಕ್ಕದ್ದು.

[1][(2) ಮಂಡಲಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

| | | |
|---|---|---|
| (ಎ) ಸಕ್ಕರೆ ಸಚಿವರು | – | ಅಧ್ಯಕ್ಷರು |
| (ಬಿ) ಕೃಷಿ ಸಚಿವರು | – | ಸದಸ್ಯರು |
| (ಸಿ) ಸಹಕಾರ ಸಚಿವರು | – | ಸದಸ್ಯರು |
| (ಡಿ) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ | – | ಸದಸ್ಯರು |
| (ಇ) ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | – | ಸದಸ್ಯರು |
| (ಎಫ್) ಕೃಷಿ ಆಯುಕ್ತರು | – | ಸದಸ್ಯರು |
| (ಜಿ) ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ | – | ಸದಸ್ಯರು |
| (ಹೆಚ್) ಯಾವೊಬ್ಬ ಕಬ್ಬು ಬೆಳೆಗಾರರ ಪೈಕಿಯಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐದಕ್ಕೆ ಮೀರದಷ್ಟು (ಬೆಳಗಾವಿ, ಗುಲ್ಬರ್ಗಾ, ಮೈಸೂರು ಮತ್ತು ಬೆಂಗಳೂರು ಪ್ರತಿ ಕಂದಾಯ ವಿಭಾಗದಿಂದ ಕನಿಷ್ಟ ಒಬ್ಬ ಸದಸ್ಯರು) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಪ್ರತಿನಿಧಿಗಳು. | – | ಸದಸ್ಯರು |
| (ಐ) ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತಿರುವವರ ಪೈಕಿಯಿಂದ ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ ಐದಕ್ಕೆ ಮೀರದಷ್ಟು (ಬೆಳಗಾವಿ, ಗುಲ್ಬರ್ಗಾ, ಮೈಸೂರು ಮತ್ತು ಬೆಂಗಳೂರು ಪ್ರತಿ ಕಂದಾಯ ವಿಭಾಗದಿಂದ ಕನಿಷ್ಟ ಒಬ್ಬರು ಹಾಗೂ | – | ಸದಸ್ಯರು |

ಅವರಲ್ಲಿ ಕನಿಷ್ಠ ಇಬ್ಬರು ಸಹಕಾರಿ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳಾಗಿರತಕ್ಕದ್ದು) ಸಕ್ಕರೆ ಕಾರ್ಖಾನೆ ಅಧಿಭೋಗದಾರರ ಪ್ರತಿನಿಧಿಗಳು.

(ಜೆ) ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ – ಸದಸ್ಯರು

(ಕೆ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ ಪ್ರಾಧ್ಯಾಪಕ ವೃಂದದ ಒಬ್ಬ ಕೃಷಿ ಹಣಕಾಸು ತಜ್ಞ – ಸದಸ್ಯರು

(ಎಲ್) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು – ಸದಸ್ಯ – ಕಾರ್ಯದರ್ಶಿ][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಪ್ರತಿಯೋಜಿಸಲಾಗಿದೆ.

[1][(2ಎ) ಮಂಡಲಿಯು ವಿಶೇಷ ಆಹ್ವಾನಿತರನ್ನು, ಅವರ ಅಭಿಪ್ರಾಯಗಳನ್ನು ಪಡೆಯುವುದು ಅವಶ್ಯವೆಂದು ಭಾವಿಸಿದಲ್ಲಿ, ಆಹ್ವಾನಿಸಬಹುದು.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಸೇರಿಸಲಾಗಿದೆ

(3) ಮಂಡಲಿಯ ಕೇಂದ್ರ ಕಾರ್ಯಸ್ಥಾನವು ಬೆಂಗಳೂರಿನಲ್ಲಿರತಕ್ಕದ್ದು.

(4) ಮಂಡಲಿಯ ಸಭೆಗಳ ನೋಟೀಸು, ಸಭೆಯ ಸ್ಥಳ, ಕೋರಂ ಹಾಗೂ ಮಂಡಲಿಯ ಕಾರ್ಯಕಲಾಪಗಳಿಗೆ ಸಂಬಂಧಿಸಿದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(5) ರಾಜ್ಯ ಸರ್ಕಾರದ ಇಚ್ಛೆಗೆ ಅಥವಾ (7) ನೇ ಉಪಪ್ರಕರಣಕ್ಕೊಳಪಟ್ಟು, ಸರ್ಕಾರೇತರ ಸದಸ್ಯನು ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಸದಸ್ಯತ್ವವನ್ನು ಹೊಂದತಕ್ಕದ್ದು. ಮಂಡಲಿಗೆ ಒಮ್ಮೆ ನಾಮ ನಿರ್ದೇಶನಗೊಂಡ ಸದಸ್ಯನು, ಎರಡನೇ ಬಾರಿಗೆ ಮರು–ನಾಮನಿರ್ದೇಶಿತನಾಗಲು ಅರ್ಹನಾಗತಕ್ಕದ್ದಲ್ಲ.

(6) ಸರ್ಕಾರೇತರ ಸದಸ್ಯನು ತನ್ನ ಕೈ ಬರಹದಲ್ಲಿ ರಾಜ್ಯ ಸರ್ಕಾರವನ್ನು ಸಂಬೋಧಿಸಿ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಬಹುದು, ಆದರೆ ಆತನು ತನ್ನ ರಾಜೀನಾಮೆಯು ಅಂಗೀಕೃತವಾಗುವವರೆಗೆ ತನ್ನ ಸ್ಥಾನದಲ್ಲಿ ಮುಂದುವರಿಯತಕ್ಕದ್ದು.

(7) ಸರ್ಕಾರೇತರ ಸದಸ್ಯನು, ಈ ಕೆಳಗೆ ನಿರ್ದಿಷ್ಟಪಡಿಸಿರುವ ಯಾವುದೇ ಒಂದು ಅನರ್ಹತೆಗೆ ಗುರಿಯಾದರೆ, ಸರ್ಕಾರವು ಆತನನ್ನು ಸ್ಥಾನದಿಂದ ತೆಗೆದುಹಾಕಬಹುದು, ಎಂದರೆ :–

(ಎ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಬಿ) ಸರ್ಕಾರದ ಅಭಿಪ್ರಾಯದಲ್ಲಿ ಆತನು ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯಾಗಿದ್ದರೆ ಹಾಗೂ ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಸಿ) ಅಸ್ವಸ್ಥ ಚಿತ್ತನಾಗಿದ್ದು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾಗಿದ್ದರೆ ; ಅಥವಾ

(ಡಿ) ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾಗಿದ್ದರೆ.

(8) ಮಂಡಲಿಯು [1][ವರ್ಷವು ಪ್ರಾರಂಭವಾದಾಗಿನಿಂದ ಮೊದಲುಗೊಂಡು ನಾಲ್ಕು ತಿಂಗಳುಗಳಿಗೆ ಒಮ್ಮೆ][1] ಕನಿಷ್ಠ ಮೂರು ಸಲ ಸಭೆ ಸೇರತಕ್ಕದ್ದು. ಮಂಡಲಿಯ ಸದಸ್ಯ–ಕಾರ್ಯದರ್ಶಿಯು ಮಂಡಲಿಯ ಅಧ್ಯಕ್ಷರ ನಿಯಂತ್ರಣಕ್ಕೆ ಒಳಪಟ್ಟು ಅವಶ್ಯವಾಗಬಹುದಾದಷ್ಟು ಸಲ ಸಭೆಗಳನ್ನು ಕರೆಯಬಹುದು ಮತ್ತು ಮೂರನೇ ಒಂದರಷ್ಟು ಸದಸ್ಯರು ಅಗತ್ಯ ಪಡಿಸಿದಾಗ ಸಭೆಯನ್ನು ಕರೆಯತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಪ್ರತಿಯೋಜಿಸಲಾಗಿದೆ.

(9) ಮಂಡಲಿಗೆ ನಾಮನಿರ್ದೇಶನಗೊಂಡ ಸರ್ಕಾರೇತರ ಸದಸ್ಯನ ಸ್ಥಾನವು ರಾಜೀನಾಮೆ, ಮರಣ, ತೆಗೆದುಹಾಕುವಿಕೆ ಅಥವಾ ಇತರೆ ರೀತಿಯಲ್ಲಿ ಖಾಲಿಯಾದಾಗ, ಸರ್ಕಾರವು ಅಂತಹ ಖಾಲಿ ಸ್ಥಾನವನ್ನು ತುಂಬಲು ಹೊಸ ಸದಸ್ಯನನ್ನು ಮೂರು ತಿಂಗಳೊಳಗೆ ನಾಮನಿರ್ದೇಶನ ಮಾಡತಕ್ಕದ್ದು ಹಾಗೂ ಅಂತಹ ಹೊಸ ಸದಸ್ಯನನ್ನು ಯಾವ ಸದಸ್ಯನ ಸ್ಥಾನಕ್ಕೆ ನಾಮನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನ ಉಳಿದಿರುವ ಪದಾವಧಿಗೆ ನಾಮನಿರ್ದೇಶನ ಮಾಡತಕ್ಕದ್ದು.

(10) ಮಂಡಲಿಯ ವ್ಯವಹರಣೆಗಳು, ಅಂತಹ ವ್ಯವಹರಣೆಗಳು ನಡೆದ ಸಮಯದಲ್ಲಿ ಮಂಡಲಿಯಲ್ಲಿ ಒಂದು ಅಥವಾ ಹೆಚ್ಚಿನ ಭರ್ತಿಮಾಡದ ಖಾಲಿಸ್ಥಾನವಿದ್ದ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದಲ್ಲ.

[1][(11) ಕಬ್ಬು ನಿಯಂತ್ರಣ ಮಂಡಳಿಯ ಸರ್ಕಾರೇತರ ಸದಸ್ಯರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಉಪವೇಶನ ಶುಲ್ಕಗಳನ್ನು ನಿಯಮಿಸಬಹುದಾದ ದರಗಳಲ್ಲಿ ಸಂದಾಯ ಮಾಡತಕ್ಕದ್ದು.

(12) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕಛೇರಿ, ಬೆಂಗಳೂರು ಇವರಿಗೆ ನಿಧಿಯನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಮಂಡಲಿಯ ಕಾರ್ಯನಿರ್ವಹಣೆಗೆ ಅಗತ್ಯವಾದ ನಿಧಿಯನ್ನು ಸರ್ಕಾರವು ಆಯವ್ಯಯದಲ್ಲಿ ಕಲ್ಪಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಸೇರಿಸಲಾಗಿದೆ.

**4. ಮಂಡಲಿಯ ಪ್ರಕಾರ್ಯಗಳು.–** ಈ ಮುಂದಿನವು ಮಂಡಲಿಯ ಪ್ರಕಾರ್ಯಗಳಾಗಿರತಕ್ಕದ್ದು:–

(ಎ) ಕಾರ್ಖಾನೆಗಳ ಅಧಿಭೋಗದಾರ ಹಾಗೂ ಕಬ್ಬು ಬೆಳೆಗಾರರ ನಡುವೆ ಆರೋಗ್ಯಕರ ಸಂಬಂಧಗಳನ್ನು ಕಾಪಾಡಿಕೊಂಡು ಬರುವ ಮಾರ್ಗೋಪಾಯಗಳನ್ನು ಶಿಫಾರಸ್ಸು ಮಾಡುವುದು.

(ಬಿ) ಸರ್ಕಾರ ಅಥವಾ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮಂಡಲಿಗೆ ಕಳುಹಿಸಿಕೊಟ್ಟಿರುವ ಯಾವುದೇ ವಿಷಯದ ಬಗ್ಗೆ, ಅದರಲ್ಲೂ ವಿಶೇಷವಾಗಿ ಕಬ್ಬು ಖರೀದಿಯ ವಿನಿಯಮನದ ಸಂಬಂಧದಲ್ಲಿ ಸಲಹೆಗಳನ್ನು ನೀಡುವುದು;

(ಸಿ) ಅಧಿನಿಯಮದ ಹಾಗೂ ಅದರ ಮೇರೆಗೆ ರಚಿಸಲಾದ ನಿಯಮಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಪ್ರಕರಣಗಳನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಗಮನಕ್ಕೆ ತರುವುದು ಹಾಗೂ ಅದನ್ನು ತಡೆಗಟ್ಟಲು ಸಲಹೆಗಳನ್ನು ಮಾಡುವುದು;

(ಡಿ) ವಿವಿಧ ಪ್ರದೇಶಗಳಲ್ಲಿ ಕಬ್ಬಿನ ತಳಿಗಳನ್ನು ಬೆಳೆಯಲು ಸೂಕ್ತವಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು;

(ಇ) ಕಬ್ಬು ಅಭಿವೃದ್ಧಿ ಕಾರ್ಯದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರಿಗೆ ಸಲಹೆ ನೀಡುವುದು.

[1][(ಎಫ್) ಆದಾಯ ಹಂಚಿಕೆ ಸೂತ್ರದ ಆಧಾರದ ಮೇಲೆ ವರ್ಷಕ್ಕಾಗಿ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಹೆಚ್ಚುವರಿ ಕಬ್ಬು ಬೆಲೆಯನ್ನು ತೀರ್ಮಾನಿಸುವುದು;

(ಜಿ) 4ಬಿ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದ ಕಾರ್ಖಾನೆ ಇತ್ಯಾದಿಯ ಆದಾಯಗಳು ಮತ್ತು ವೆಚ್ಚಗಳು, ಲೆಕ್ಕಪತ್ರದ ಪುಸ್ತಕಗಳು, ಯಾವುದಾದರೂ ಇದ್ದಲ್ಲಿ, ಆ ವಿಷಯಗಳನ್ನೂ ಒಳಗೊಂಡಂತೆ, ಅದರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ವಿಚಾರಣೆಗೊಳಪಡಿಸುವುದು;

(ಎಚ್) ಆದಾಯ ಪ್ರಾಪ್ತಿಯಮೇಲೆ (revenue realisation) ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ 4ಸಿ ಪ್ರಕರಣದ ಅಡಿಯಲ್ಲಿ ರಚಿಸಲಾದ ತಜ್ಞರ ಸಮಿತಿಯ ವರದಿಯನ್ನು ಪರಿಗಣಿಸುವುದು;

(ಐ) ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಪ್ರತಿಯೋಜಿಸಲಾಗಿದೆ.

[1][**4ಎ. ಕಬ್ಬಿನ ಹೆಚ್ಚುವರಿ ಕಬ್ಬು ಬೆಲೆಯ ಘೋಷಣೆ.–** (1) ಮಂಡಲಿಯ ನಿರ್ಧಾರದಂತೆ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಅಧಿಸೂಚನೆಯ ಮೂಲಕ, ವರ್ಷಕ್ಕಾಗಿ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಹೆಚ್ಚುವರಿ ಕಬ್ಬು ಬೆಲೆಯನ್ನು ಘೋಷಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ರಾಜ್ಯ ವಿಧಾನ ಮಂಡಲದ ಉಭಯ ಸಧನಗಳ ಮುಂದೆ ಮಂಡಿಸತಕ್ಕದ್ದು.

**4ಬಿ. ಮಂಡಲಿಯು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರತಕ್ಕದ್ದು.–** ಮಂಡಲಿಯು, ಈ ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿನ ವಿಷಯಗಳಲ್ಲಿ ವಿಚಾರಣೆ ಮಾಡುವ ಸಂದರ್ಭದಲ್ಲಿ, ಸಿವಿಲ್‌ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ರಾಜ್ಯದ ಯಾವೊಬ್ಬ ವ್ಯಕ್ತಿಗೆ ಸಮನು ನೀಡುವುದು ಮತ್ತು ಆತನ ಹಾಜರಾತಿಯನ್ನು ಒತ್ತಾಯಪಡಿಸುವುದು ಹಾಗೂ ಆತನನ್ನು ಪ್ರಮಾಣದ ಮೇಲೆ ವಿಚಾರಣೆ ಮಾಡುವುದು;

(ಬಿ) ಯಾವುದೇ ದಸ್ತಾವೇಜನ್ನು ಹುಡುಕುವುದು ಮತ್ತು ಹಾಜರಿಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ (ಅಫಿದಾವಿಟ್ಟು) ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ)ದಸ್ತಾವೇಜುಗಳು ಮತ್ತು ಸಾಕ್ಷಿಗಳ ವಿಚಾರಣೆಗಾಗಿ ಅಧಿಕಾರಾದೇಶಗಳನ್ನು (commission) ಹೊರಡಿಸುವುದು;

(ಎಫ್) ನಿಯಮಿಸಬಹುದಾದ ಯಾವುದೇ ಇತರ ವಿಷಯ.

**4ಸಿ. ಆದಾಯ ಪ್ರಾಪ್ತಿಯನ್ನು ಲೆಕ್ಕ ಹಾಕುವುದಕ್ಕಾಗಿ ಸಮಿತಿ:–** (1) ಸಕ್ಕರೆ ಕಾರ್ಖಾನೆಯಲ್ಲಿ ಆದಾಯ ಪ್ರಾಪ್ತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವಲ್ಲಿ ಮಂಡಲಿಗೆ ಸಲಹೆ ನೀಡಲು ಸರ್ಕಾರವು ಈ ಕೆಳಗಿನವರನ್ನೊಳಗೊಂಡ ತಜ್ಞ ಸಮಿತಿಯೊಂದನ್ನು ರಚಿಸತಕ್ಕದ್ದು,–

| | |
|---|---|
| (ಎ) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು | – ಅಧ್ಯಕ್ಷರು |
| (ಬಿ) ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ | – ಸದಸ್ಯರು |
| (ಸಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಪ್ರಾಧ್ಯಾಪಕ ವೃಂದದ ಒಬ್ಬ ಕೃಷಿ ಹಣಕಾಸು ತಜ್ಞ | – ಸದಸ್ಯರು |
| (ಡಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಪ್ರಾಧ್ಯಾಪಕ ವೃಂದದ ಒಬ್ಬ ಕಬ್ಬು ಕೃಷಿ ಶಾಸ್ತ್ರಜ್ಞ | – ಸದಸ್ಯರು |
| (ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಅಥವಾ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಇಲ್ಲಿನ ಒಬ್ಬ ತಂತ್ರಜ್ಞ | – ಸದಸ್ಯರು |
| (ಎಫ್) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕಛೇರಿಯ ಕೇಂದ್ರ ಸ್ಥಾನಿಕ ಸಹಾಯಕರು (ಹೆಚ್‌ಕ್ಯೂಎ) | –ಸದಸ್ಯ ಕಾರ್ಯದರ್ಶಿ |

(2) ಸರ್ಕಾರದ ಇಚ್ಛೆಗೊಳಪಟ್ಟು, ಸಮಿತಿಯ ನಾಮನಿರ್ದೇಶಿತ ಸದಸ್ಯರ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು.

(3) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕಬ್ಬು ಅರೆಯುವ ಹಂಗಾಮಿನ ಕೊನೆಯಲ್ಲಿ ಮಾಡಿದ ಕಾರ್ಖಾನೆವಾರು ಇಳುವರಿಯ ಪ್ರಕಟಣೆಯ ತರುವಾಯ ಪ್ರತಿಯೊಂದು ಸಕ್ಕರೆ ಕಾರ್ಖಾನೆಯ ಆದಾಯದ ಪ್ರಾಪ್ತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಕ್ಕರೆ ಕಾರ್ಖಾನೆಯ ತಪಾಸಣೆ ಮಾಡುವ ಮತ್ತು ಹದಿನೈದು ದಿನಗಳೊಳಗಾಗಿ ಮಂಡಲಿಗೆ ವರದಿಯನ್ನು ಸಲ್ಲಿಸುವ ಅಧಿಕಾರವನ್ನು ತಜ್ಞ ಸಮಿತಿಯು ಹೊಂದಿರತಕ್ಕದ್ದು. ಮಂಡಲಿಯು, ವರದಿಯನ್ನು ಪರಿಗಣಿಸಿದ ಮೇಲೆ ಮತ್ತು ತಾನು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಮಾಹಿತಿಯನ್ನು ಸಂಗ್ರಹಿಸಿದ ತರುವಾಯ, ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸತಕ್ಕದ್ದು.

**4ಡಿ. ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ ಮಂಡಲಿಯು ಪರಿಗಣಿಸಬೇಕಾದ ಅಂಶಗಳು.–** ಮಂಡಲಿಯು ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವಾಗ ಈ ಮುಂದಿನ ಅಂಶಗಳನ್ನು ಪರಿಗಣಿಸತಕ್ಕದ್ದು, ಎಂದರೆ :–

(1) ಒಪ್ಪಿಸಲಾದ ಕಬ್ಬಿನ ದಾಖಲಿಸಲಾದ ತೂಕ, ಅರೆದ ಕಬ್ಬಿನಿಂದ ವಾಸ್ತವವಾಗಿ ಪ್ರಾಪ್ತವಾದ ಆದಾಯದ, ಮತ್ತು ಸಕ್ಕರೆ ಉತ್ಪಾದನೆ ಹಾಗೂ ಅದರ ಉಪ–ಉತ್ಪತ್ತಿ ಎಂದರೆ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್–ಮಡ್; ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ ;

**ವಿವರಣೆ:–** ಈ ಖಂಡದ ಉದ್ದೇಶಕ್ಕಾಗಿ, ವರ್ಷದಲ್ಲಿ ಅರೆದ ಕಬ್ಬಿನಿಂದ ಪ್ರಾಪ್ತವಾದ ಆದಾಯವು, ಸಕ್ಕರೆಯ ವಾಸ್ತವ ಉತ್ಪಾದನೆ ಮತ್ತು ಅದರ ಉಪ–ಉತ್ಪತ್ತಿಗಳಾದ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್–ಮಡ್; ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಮಾರಾಟ ಮಾಡಿರದಿದ್ದಾಗ್ಯೂ, ಮಾರಾಟಗಳು, ಪ್ರಾರಂಭದ ಮತ್ತು ಮುಕ್ತಾಯದ ದಾಸ್ತಾನನ್ನು ಪರಿಗಣಿಸಿ ಸೂಕ್ತವಾಗಿ ಮೌಲ್ಯಮಾಡಿದವುಗಳನ್ನು ಒಳಗೊಳ್ಳುತ್ತದೆ.

(2) ಆದಾಯ ಪ್ರಾಪ್ತಿಯಮೇಲೆ ಹೆಚ್ಚುವರಿ ಕಬ್ಬು ಬೆಲೆಯ ನಿರ್ಧಾರಣೆಗಾಗಿ 4ಸಿ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟ ತಜ್ಞ ಸಮಿತಿಯ ವರದಿ.

(3) ನಿಯಮಿಸಬಹುದಾದ ಅಂಥ ಇತರ ಅಂಶಗಳು.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಸೇರಿಸಲಾಗಿದೆ

**5. ಕಾರ್ಖಾನೆಗಳಲ್ಲಿ ಬಳಸಲು ಸೂಕ್ತವಲ್ಲದ ಕಬ್ಬಿನ ತಳಿಗಳನ್ನು ಘೋಷಿಸುವ ಅಧಿಕಾರಗಳು.–** ಸರ್ಕಾರವು, ಕಬ್ಬು ನಿಯಂತ್ರಣ ಮಂಡಲಿಯ ಶಿಫಾರಸ್ಸುಗಳ ಮೇಲೆ, ಅಂತಹ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಪ್ರದೇಶದಲ್ಲಿ

ಬೆಳೆಯುವ ಕಬ್ಬಿನ ತಳಿಯನ್ನು ಸೂಕ್ತವಲ್ಲದ ವಿಧದ ಕಬ್ಬಿನ ತಳಿಯೆಂದು ಘೋಷಿಸಬಹುದು ಮತ್ತು ಹಾಗೆ ಘೋಷಿಸಲಾದಂತಹ ವಿಧದ ಕಬ್ಬಿನ ತಳಿಯ ಕಬ್ಬನ್ನು ಯಾವುದೇ ಕಾರ್ಖಾನೆಯು ಖರೀದಿಸತಕ್ಕದ್ದಲ್ಲ.

**6. ಕೆಲವು ಬಗೆಯ ಕಬ್ಬಿನ ತಳಿಗಳ ಬಿತ್ತನೆ ಬೀಜಗಳ ವಿತರಣೆಯ ನಿಷೇಧ.–** ಕಾರ್ಖಾನೆಯ ಅಧಿಭೋಗದಾರ ಅಥವಾ ಆತನ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ಇತರ ವ್ಯಕ್ತಿಯು, 5ನೇ ಪ್ರಕರಣದ ಮೇರೆಗೆ ಸೂಕ್ತವಲ್ಲದ ವಿಧದ ಕಬ್ಬಿನ ತಳಿಯೆಂದು ಸರ್ಕಾರವು ಘೋಷಿಸಿದ್ದರೆ, ಯಾವುದೇ ಪ್ರದೇಶದಲ್ಲಿ ಯಾರೇ ವ್ಯಕ್ತಿಗೆ ಅಂತಹ ತಳಿಯನ್ನು ವಿತರಿಸತಕ್ಕದ್ದಲ್ಲ, ಮತ್ತು ಅಂತಹ ತಳಿಯ ಕಬ್ಬಿನ ಬಿತ್ತನೆಯನ್ನು ಮಾಡತಕ್ಕದ್ದಲ್ಲ.

[1][**7. ಮೀಸಲು ಪ್ರದೇಶದಿಂದ ಕಬ್ಬಿನ ಖರೀದಿ.–** ಮೀಸಲು ಪ್ರದೇಶದಿಂದ ಸಕ್ಕರೆ ಕಾರ್ಖಾನೆಗಳ ಮೂಲಕ ಕಬ್ಬಿನ ಖರೀದಿಯನ್ನು, ಕಾಲಕಾಲಕ್ಕೆ ತಿದ್ದುಪಡಿಯಾಗಿರುವ ಕಬ್ಬು (ನಿಯಂತ್ರಣ) ಆದೇಶ, 1966ರ ಅನ್ವಯ, ನಿಯಂತ್ರಣ ಮಾಡತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಪ್ರತಿಯೋಜಿಸಲಾಗಿದೆ.

**8. ತೂಕ.–** [1][(1) ದಾಖಲಿಸಲಾದ ತೂಕದ ಆಧಾರದ ಮೇಲೆ ಕಬ್ಬಿನ ಖರೀದಿ ಮತ್ತು ಸರಬರಾಜಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳು ಮತ್ತು ಗುತ್ತಿಗೆಗಳನ್ನು, ಅಂಕೀಕೃತ (ಡಿಜಿಟೈಸ್ಡ್) ಮೆಟ್ರಿಕ್ ಪದ್ಧತಿ ತೂಕಗಳು ಮತ್ತು ಅಳತೆಗಳ ಅನುಸಾರವಾಗಿ ಮಾಡತಕ್ಕದ್ದು ಮತ್ತು ಸಕ್ಕರೆ ಕಾರ್ಖಾನೆಗಳ ಕಬ್ಬು ಪ್ರಾಂಗಣಗಳಲ್ಲಿ ಸ್ವಯಂಚಾಲಿತ ಫಲಕಗಳಲ್ಲಿ ಪ್ರದರ್ಶಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಪ್ರತಿಯೋಜಿಸಲಾಗಿದೆ.

[1][(2) ಯಾವುದೇ ನಿಖರವಲ್ಲದ, ಅನಧಿಕೃತವಾದ, ಪ್ರಮಾಣೀಕರಿಸಿಲ್ಲದ ತಕ್ಕಡಿಗಳು ಅಥವಾ ತೂಕಗಳು ಅಥವಾ ಯಾಂತ್ರಿಕ ತೂಕದ ಉಪಕರಣಗಳನ್ನು, ಕಾರ್ಖಾನೆಯ ಅಧಿಭೋಗದಾರನು ಅಥವಾ ಅವನ ಪರವಾಗಿ ವ್ಯಕ್ತಿಯು ಬಳಸತಕ್ಕದ್ದಲ್ಲ, ಇಟ್ಟುಕೊಳ್ಳತಕ್ಕದ್ದಲ್ಲ ಅಥವಾ ಹೊಂದತಕ್ಕದ್ದಲ್ಲ ಅಥವಾ ಕ್ವಿಂಟಾಲ್‌ನ 1/20ರ ಸಮೀಪದ ತೂಕಕ್ಕೆ ಹಾಗೂ ಬಹುವಿಧದ ಹಾಗೂ ಅದರ ಉಪ ವಿಧಗಳ ಮೆಟ್ರಿಕ್ ಪದ್ಧತಿಗೆ ಅನುಸಾರವಾಗಿರದ, ದಾಖಲಿಸಲಾದ ತೂಕವನ್ನು ಕಬ್ಬು ಮಾರಾಟಗಾರರಿಗೆ ಸುಲಭವಾಗಿ ಓದಲು ಸಾಧ್ಯವಾಗುವುದಿಲ್ಲವೋ ಅಂತಹ ತೂಕದ ಯಂತ್ರವನ್ನು ಉಪಯೋಗಿಸತಕ್ಕದ್ದಲ್ಲ:

ಪರಂತು, ಐದು ಕಿಲೋಗ್ರಾಂಗಳವರೆಗೆ ಅಥವಾ ಶೇಕಡಾ ಒಂದಷ್ಟು ಅಂತರದ ತೂಕದ ವ್ಯತ್ಯಾಸ ಇವೆರಡರಲ್ಲಿ ಯಾವುದು ಕಡಿಮೆಯೋ ಅಂತಹ ವ್ಯತ್ಯಾಸವನ್ನು ಪರಿಗಣಿಸತಕ್ಕದ್ದಲ್ಲ:

ಮತ್ತು ಪರಂತು, ಮತ್ತಷ್ಟು ಸರಿಪಡಿಸಲು ಅಸಾಧ್ಯವಾದ ತೂಕದ ಯಂತ್ರವು ಸರಿಯಾದ ತೂಕದ ಶೇಕಡ ಒಂದರಷ್ಟು ವ್ಯತ್ಯಾಸ ತೂಗುವುದನ್ನು ಸಮರ್ಪಕವಾಗಿಲ್ಲವೆಂದು ಭಾವಿಸತಕ್ಕದ್ದಲ್ಲ.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಪ್ರತಿಯೋಜಿಸಲಾಗಿದೆ.

(3) ಬಳಸಲಾದ ಎಲ್ಲಾ ತಕ್ಕಡಿಗಳನ್ನು ಹಾಗೂ ತೂಕಗಳನ್ನು ಎಲ್ಲಾ ಯುಕ್ತ ಕಾಲಗಳಲ್ಲಿ ನೋಟೀಸು ನೀಡದೆ ಪರಿಶೀಲಿಸಲು ಅಥವಾ ಪರೀಕ್ಷೆಗೆ ಒಳಪಡಿಸಲು ಮುಕ್ತವಾಗಿರತಕ್ಕದ್ದು, ಹಾಗೂ ಅಧಿಭೋಗದಾರನು ಕಬ್ಬು ಬೆಳೆಗಾರರು ಅಥವಾ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯು ಅಗತ್ಯಪಡಿಸಿದಾಗಲೆಲ್ಲ ಅಂತಹ ಪರಿಶೀಲನೆಗೆ ಅಥವಾ ಪರೀಕ್ಷೆಗೆ ಎಲ್ಲಾ ತಕ್ಕಡಿಗಳು, ತೂಕಗಳು ಲಭ್ಯವಾಗುವಂತೆ ಮಾಡತಕ್ಕದ್ದು.

(4) ಖರೀದಿಸಲಾದ ಕಬ್ಬಿನ ನಿವ್ವಳ ತೂಕದಲ್ಲಿ ಕೇಂದ್ರ ಸರ್ಕಾರವು ಕಟ್ಟು ಕಟ್ಟುವ ಸಾಮಗ್ರಿಗಳೆಂದು ಅನುಮತಿಸಿರುವುದಕ್ಕಿಂತ ಹೆಚ್ಚಿಗೆ ತೂಕವನ್ನು ಕಡಿಮೆಗೊಳಿಸತಕ್ಕದ್ದಲ್ಲ.

(5) ಕಾರ್ಖಾನೆಯ ಅಧಿಭೋಗದಾರನು ತೂಕದ ಯಂತ್ರದ ಬಳಿ ಸಾಕಷ್ಟು ಬೆಳಕಿನ ವ್ಯವಸ್ಥೆ, ಸಿದ್ಧತೆಯನ್ನು ಮಾಡಿದ ಹೊರತು ಸೂರ್ಯಾಸ್ತದ ತರುವಾಯ ಅರ್ಧಗಂಟೆಗಿಂತ ಹೆಚ್ಚು ಕಾಲ ಕಬ್ಬಿನ ತೂಕವನ್ನು ಮಾಡತಕ್ಕದ್ದಲ್ಲ.

(6) ಕಾರ್ಖಾನೆಯ ಅಧಿಭೋಗದಾರನು ರೈತರ ಪಾಸ್ ಪುಸ್ತಕಗಳಲ್ಲಿ ಪ್ರತಿಯೊಂದು ಎತ್ತಿನಗಾಡಿ, ಟ್ರಾಕ್ಟರ್, ಲಾರಿ ಅಥವಾ ಯಾವುದೇ ವಾಹನ ಆಗಮಿಸಿದ ಹಾಗೂ ನಿರ್ಗಮಿಸಿದ ಸಮಯವನ್ನು ದಾಖಲಿಸತಕ್ಕದ್ದು.

(7) ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತೃಪ್ತಿಕರವೆನಿಸುವಂತೆ ಸೂಕ್ತ ಸಿದ್ಧತೆಗಳನ್ನು ಎಲ್ಲಾ ಖರೀದಿ ಕೇಂದ್ರಗಳಲ್ಲಿ ಕಾರ್ಖಾನೆಯ ಅಧಿಬೋಗದಾರನು ಈ ಕೆಳಕಂಡ ವಿಷಯಗಳಲ್ಲಿ ಮಾಡತಕ್ಕದ್ದು:–

(ಎ) ದಟ್ಟಣೆಯನ್ನು ನಿವಾರಿಸಲು ವಾಹನಗಳ ಪ್ರವೇಶ ಹಾಗೂ ನಿಲುಗಡೆಯನ್ನು ನಿಯಂತ್ರಿಸುವುದು.

(ಬಿ) ತೂಕದ ಯಂತ್ರಗಳ ಸಮೀಪಕ್ಕೆ ರಸ್ತೆಗಳು ಹಾಗೂ ಸಂಪರ್ಕ ರಸ್ತೆಗಳು;

(ಸಿ) ದನಗಳ ಷೆಡ್ಡುಗಳು ಹಾಗೂ ನೀರಿನ ತೊಟ್ಟಿಗಳು

(ಡಿ) ಕ್ಯಾಂಟೀನ್, ಕುಡಿಯುವ ನೀರು, ಪ್ರಥಮ ಚಿಕಿತ್ಸಾ ಕೇಂದ್ರ ಹಾಗೂ ಇತರ ಮೂಲಸೌಕರ್ಯಗಳು

(8) ಕಬ್ಬು ಬೆಳೆಗಾರರ ಯಾರೇ ಪ್ರತಿನಿಧಿಗಳನ್ನು, ಕಬ್ಬಿನ ತೂಕದ ವೇಳೆಯಲ್ಲಿ ತೂಕಗಳನ್ನು ದಾಖಲಿಸುವಲ್ಲಿ ತೂಕಗಳನ್ನು ನೋಡಲು ಅಥವಾ ಪರಿಶೀಲನೆ ಮಾಡಲು ಹಾಗೂ ದಾಖಲೆಗಳನ್ನು ಪರೀಕ್ಷಿಸಲು ಯಾವುದೇ ತೂಕಯಂತ್ರದ ಬಳಿ ಹಾಜರಿರಲು ಅನುಮತಿಸತಕ್ಕದ್ದು;

(9) ಯಾವುದೇ ಸಂದರ್ಭದಲ್ಲಿ ವಾಸ್ತವಿಕವಾಗಿ ತೂಕ ಮಾಡದೆ ಕಬ್ಬನ್ನು ಖರೀದಿಸತಕ್ಕದ್ದಲ್ಲ ಯಾವ ತೂಕದ ಯಂತ್ರದ ಮೂಲಕ ಅದರ ಹೊಂದಾಣಿಕೆಯನ್ನು ನಿಯಂತ್ರಿಸಲಾಗಿದೆಯೇ ಅಂತಹ ಯಂತ್ರದ ಭಾಗವನ್ನು ಸೂಕ್ತವಾಗಿ ಮೊಹರು ಹಾಕಿ ಅಥವಾ ಬೀಗ ಹಾಕಿ ಇಡತಕ್ಕದ್ದು;

(10) ಖರೀದಿ ಕೇಂದ್ರಗಳಲ್ಲಿರುವ ಎಲ್ಲಾ ತೂಕದ ಯಂತ್ರ ಅಥವಾ ತಕ್ಕಡಿಗಳನ್ನು, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಈ ಸಂಬಂಧದಲ್ಲಿ ನಾಮ ನಿರ್ದೇಶಿಸಿದ ಯಾರೇ ವ್ಯಕ್ತಿಯ ಸಮ್ಮುಖದಲ್ಲಿ ಕನಿಷ್ಠ ಪಕ್ಷ ಒಂದು ವಾರಕ್ಕೊಮ್ಮೆ ಪರೀಕ್ಷಿಸತಕ್ಕದ್ದು ಹಾಗೂ ಅಂತಹ ಪರೀಕ್ಷೆಗಳ ದಾಖಲೆಯನ್ನು ಯುಕ್ತವಾಗಿ ನಿರ್ವಹಿಸತಕ್ಕದ್ದು. ಪರೀಕ್ಷೆಯ ವೇಳೆಯಲ್ಲಿ ಹಾಜರಿರಲು ಬಯಸುವ ಯಾರೇ ಕಬ್ಬು ಬೆಳೆಗಾರನಿಗೆ ಸಹ ಹಾಗೆ ಹಾಜರಿರಲು ಅನುಮತಿಸತಕ್ಕದ್ದು;

(11) ಘಟಕವಾರು ಕೋರಿಕೆ ಚೀಟಿಯಲ್ಲಿ ನಿರ್ದಿಷ್ಟಪಡಿಸಲಾದ ತೂಕದ ಶೇಕಡ ಹತ್ತರಷ್ಟವರೆಗೆ ಕಬ್ಬು ಬೆಳೆಗಾರನು ತಂದಿರುವ ಹೆಚ್ಚಿನ ಕಬ್ಬನ್ನು ಕಾರ್ಖಾನೆಯ ಅಧಿಭೋಗದಾರನು ಸ್ವೀಕರಿಸತಕ್ಕದ್ದು ಹಾಗೂ ಎಷ್ಟೇ ಕಡಿಮೆ ಪ್ರಮಾಣದ ತೂಕವನ್ನು ಸ್ವೀಕರಿಸಲು ಯಾವುದೇ ಆಕ್ಷೇಪಣೆಗಳು ಇರತಕ್ಕದ್ದಲ್ಲ.

**9. ಕಬ್ಬು ಬೆಳೆಗಾರರಿಗೆ ಹಣ ಸಂದಾಯ.–** [1][(1) ಕಬ್ಬು ಬೆಳೆಗಾರರಿಗೆ ಪಾವತಿಯನ್ನು ಎರಡು ಹಂತಗಳಲ್ಲಿ ಮಾಡತಕ್ಕದ್ದು. ಮೊದಲ ಹಂತದಲ್ಲಿ, ಕಬ್ಬನ್ನು ಸರಬರಾಜು ಮಾಡಿದ ತಕ್ಷಣ, ಕಾರ್ಖಾನೆಯ ಅಧಿಭೋಗದಾರನು ಸಂಬಂಧಪಟ್ಟ ಕಾರ್ಖಾನೆಯ ಹಿಂದಿನ ವರ್ಷದ ಇಳುವರಿಯ ಆಧಾರದ ಮೇಲೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಪಾವತಿಸತಕ್ಕದ್ದು. ಕಬ್ಬು ಪಾವತಿಯ ಇತರ ಎಲ್ಲಾ ಷರತ್ತುಗಳು ಕಬ್ಬು (ನಿಯಂತ್ರಣ) ಆದೇಶ, 1966ರ 3ನೇ ಖಂಡದ ಉಪಬಂಧಗಳಿಗೆ ಅನುಸಾರವಾಗಿ ಇರತಕ್ಕದ್ದು.

(1ಎ) ಎರಡನೇ ಹಂತದಲ್ಲಿ, 4ಎ ಪ್ರಕರಣದ ಅಡಿಯಲ್ಲಿ ಘೋಷಣೆಯಾದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಕಾರ್ಖಾನೆಯ ಅಧಿಭೋಗದಾರನು ಹೆಚ್ಚುವರಿ ಕಬ್ಬು ಬೆಲೆಯ ಪಾವತಿಯನ್ನು ಮಾಡತಕ್ಕದ್ದು.

(1ಬಿ) ಈ ಅಧಿನಿಯಮದ ಅಡಿಯಲ್ಲಿ ಕಾರ್ಖಾನೆಯ ಅಧಿಭೋಗದಾರನು ಮಾಡುವ ಪ್ರತಿಯೊಂದು ಪಾವತಿಯನ್ನು, ಕಬ್ಬು ಬೆಳೆಗಾರನಿಗೆ ಆತನ ಬ್ಯಾಂಕ್ ಖಾತೆಯ ಮೂಲಕ ಮಾತ್ರವೇ ಪಾವತಿಸತಕ್ಕದ್ದು.

(1ಸಿ) ನ್ಯಾಯ ಮತ್ತು ಲಾಭದಾಯಕ ಬೆಲೆಯ ಸಂಬಂಧದಲ್ಲಿನ ಕಬ್ಬು (ನಿಯಂತ್ರಣ) ಆದೇಶ, 1966ರ ಬಾಕಿಗಳನ್ನು ವಸೂಲಿ ಮಾಡುವ ಉಪಬಂಧಗಳು ಹೆಚ್ಚುವರಿ ಕಬ್ಬು ಬೆಲೆಯ ಹಿಂಬಾಕಿಯ ವಸೂಲಾತಿಗೂ ಕೂಡಾ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 28.08.2014 ರಿಂದ ಪ್ರತಿಯೋಜಿಸಲಾಗಿದೆ.

(2) ಕಾರ್ಖಾನೆಯಲ್ಲಿ ದಾಖಲಿಸಲಾದ ಕಬ್ಬಿನ ತೂಕದ ಆಧಾರದ ಮೇಲೆ ಸಂದಾಯವನ್ನು ಮಾಡತಕ್ಕದ್ದು. ಸಂದಾಯವಾಗಬೇಕಾದ ಕಬ್ಬಿನ ದರವನ್ನು ಹತ್ತಿರದ ರೂಪಾಯಿಗೆ ಲೆಕ್ಕಹಾಕತಕ್ಕದ್ದು.

(3) ಕಾರ್ಖಾನೆಯ ಅಧಿಭೋಗದಾರನು, ತಾನು ಖರೀದಿಸಿದ ಕಬ್ಬಿಗೆ ಸಂಬಂಧಿಸಿದಂತೆ ಬಾಕಿಯಿರುವ ಎಲ್ಲಾ ಸಂದಾಯಗಳನ್ನು ಮಾಡಲು ಜವಾಬ್ದಾರನಾಗಿರತಕ್ಕದ್ದು ಹಾಗೂ ಕಾರ್ಖಾನೆಯ ಅಂತಹ ಅಧಿಭೋಗದಾರನು ಖರೀದಿಸಿದ ಕಬ್ಬಿಗೆ ಸಂದಾಯಗಳನ್ನು ಮಾಡಲು ತಪ್ಪಿದರೆ, ಅಂತಹ ಕಾರ್ಖಾನೆಯ ಅಧಿಭೋಗದಾರನು ಕಬ್ಬು ನಿಯಂತ್ರಣ ಆದೇಶ, 1966ರಲ್ಲಿ ನಿರ್ದಿಷ್ಟಪಡಿಸಲಾದಂತೆ ಅಂತಹ ಸಂದಾಯವು ಬಾಕಿ ಉಳಿದಿರುವ ದಿನಾಂಕದಿಂದ ಅದರ ಮೇಲಿನ ಬಡ್ಡಿಯೊಂದಿಗೆ ಅಂತಹ ಸಂದಾಯ ಮಾಡಲು ಜವಾಬ್ದಾರನಾಗಿರತಕ್ಕದ್ದು.

**10. ದಂಡ.–** ಯಾರೇ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿರುವ ಯಾವುದೇ ನಿಯಮಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದರೆ, ಆತನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**11. ಅಪರಾಧದ ಸಂಜ್ಞೇಯತೆ.–** ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಅಧಿಕೃತಗೊಳಿಸಿದ ಅಧಿಕಾರಿಯು ದೂರನ್ನು ನೀಡಿದ ಹೊರತು, 10ನೇ ಪ್ರಕರಣದ ಮೇರೆಗೆ ದಂಡನೀಯನಾಗಬಹುದಾದ ಯಾವುದೇ

ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟರಿಗಿಂತ ಕೆಳಗಿನ ನ್ಯಾಯಾಲಯವು ಅಂಥ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದಲ್ಲ.

12. **ಅಪರಾಧಗಳನ್ನು ರಾಜಿ ಮಾಡಲು ಅಧಿಕಾರ.–** (1) ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳ ಅಡಿಯಲ್ಲಿನ ಅಪರಾಧದ ಆರೋಪಿತ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಿದ ನಂತರ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಅಥವಾ ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯು ಈ ಪ್ರಕರಣದ ಬಗ್ಗೆ ತೀರ್ಪನ್ನು ಘೋಷಿಸುವುದಕ್ಕೆ ಮುಂಚೆ ಯಾವುದೇ ಹಂತದಲ್ಲಿ ಅಂತಹ ಅಪರಾಧದ ಸಂಬಂಧದಲ್ಲಿ ರಾಜಿಯ ರೂಪದಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಮೀರದ ಮೊತ್ತದ ಹಣವನ್ನು ಅವನಿಂದ ಸ್ವೀಕರಿಸಿ ಸರ್ಕಾರಕ್ಕೆ ಜಮೆ ಮಾಡತಕ್ಕದ್ದು.

(2) ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಈ ಪ್ರಕರಣದ ಮೇರೆಗೆ ಅಪರಾಧದ ಸಂಬಂಧದಲ್ಲಿ ಉಪಪ್ರಕರಣ (1)ರಲ್ಲಿ ರಾಜಿಯನ್ನು ಮಾಡಿದಾಗ, ಕಾರ್ಖಾನೆಯ ಅಧಿಭೋಗದಾರ ಅಥವಾ ಯಾರೇ ಇತರ ವ್ಯಕ್ತಿಯು 10ನೇ ಪ್ರಕರಣದ ಮೇರೆಗೆ ಅಂಥ ಅಪರಾಧದ ಸಂಬಂಧದಲ್ಲಿನ ಕಾನೂನು ಕ್ರಮಕ್ಕೆ ಅಥವಾ ಯಾವುದೇ ಇತರ ಹೆಚ್ಚಿನ ದಂಡಕ್ಕೆ ಗುರಿಯಾಗತಕ್ಕದ್ದಲ್ಲ.

13. **ಕಂಪೆನಿಗಳು, ಫರ್ಮ್‌ಗಳು ಹಾಗೂ ಪಾಲುದಾರಿಕೆಗಳಿಂದ ಅಪರಾಧಗಳು.–** ಸಕ್ಕರೆ ಕಾರ್ಖಾನೆಯ ಅಧಿಭೋಗದಾರನು ಒಂದು ಕಂಪೆನಿ, ಫರ್ಮ್ ಅಥವಾ ಪಾಲುದಾರ ಅಥವಾ ಸಂಘ ಅಥವಾ ಇತರ ಸಂಸ್ಥೆಯಾಗಿದ್ದಲ್ಲಿ, ಸಂದರ್ಭಾನುಸಾರ ಅದರ ಒಬ್ಬ ಅಥವಾ ಹೆಚ್ಚಿನ ಪಾಲುದಾರರು ಅಥವಾ ಸದಸ್ಯರು ಅಥವಾ ನಿರ್ದೇಶಕರನ್ನು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಅಪರಾಧಕ್ಕಾಗಿ ಆತನ ವಿರುದ್ಧ ಕಾನೂನು ಕ್ರಮ ಜರುಗಿಸತಕ್ಕದ್ದು ಮತ್ತು ದಂಡಿಸತಕ್ಕದ್ದು.

14. **ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸಾರ್ವಜನಿಕ ನೌಕರರಾಗಿರುವುದು.–** ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಹಾಗೂ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಅಧಿಕಾರಿಯನ್ನು ಭಾರತ ದಂಡ ಸಂಹಿತೆ, 1860ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು.

15. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮದ ಅಥವಾ ಆದೇಶದ ಯಾವುದೇ ಉಪಬಂಧಗಳಿಗನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಸರ್ಕಾರದ ಅಥವಾ ಯಾರೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆ, ಕಾನೂನು ಕ್ರಮ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

16. **ನಿಯಮಗಳನ್ನು ರಚಿಸುವ ಅಧಿಕಾರ.–**(1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಮೇಲೆ ಹೇಳಲಾದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,–

(ಎ) ಕಬ್ಬು ನಿಯಂತ್ರಣ ಮಂಡಲಿಯ ವ್ಯವಹಾರ ನಿರ್ವಹಣೆ ಪ್ರಕ್ರಿಯೆ;

(ಬಿ) ಯಾವ ನಮೂನೆಯಲ್ಲಿ ಯಾವ ನೋಟೀಸನ್ನು ನೀಡತಕ್ಕದ್ದೋ ಆ ನಮೂನೆ

(3) ಕಬ್ಬಿನ ಖರೀದಿಗಾಗಿ ಮಾಡಿಕೊಳ್ಳಬೇಕಾದ ಒಪ್ಪಂದದ ನಮೂನೆ, ಯಾವ ದಿನಾಂಕದಲ್ಲಿ ಅಂತಹ ಒಪ್ಪಂದವನ್ನು ಮಾಡಿಕೊಳ್ಳಬೇಕೋ ಆ ದಿನಾಂಕ ಹಾಗೂ ಅದರ ನಿಬಂಧನೆಗಳು ಮತ್ತು ಷರತ್ತುಗಳು;

(4) ಕಬ್ಬಿನ ಸರಿಯಾದ ತೂಕವನ್ನು ಮಾಡುವಿಕೆ, ತೂಕ ಮಾಡಲು ಹಾಗೂ ತೂಕಗಳನ್ನು ಪರೀಕ್ಷಿಸಲು ಸೌಲಭ್ಯಗಳನ್ನು ಕಲ್ಪಿಸುವುದು ಹಾಗೂ ತೂಕಗಳನ್ನು ಮಾಡುವ ಸಮಯ; ಹಾಗೂ

(5) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

– ಇವುಗಳಿಗಾಗಿ ಉಪಬಂಧಿಸಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

**2014ರ ಕರ್ನಾಟಕ ಅಧಿನಿಯಮ ಸಂಖ್ಯೆ: 28**

(2014ರ ಆಗಸ್ಟ್ ತಿಂಗಳ 28ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2014**

(2014ರ ಆಗಸ್ಟ್ ತಿಂಗಳ 25ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ 33) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 2, 3, 4, 4ಎ, 4ಬಿ, 4ಸಿ, 4ಡಿ, 7, 8, 9,ಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಸ್.ಬಿ. ಗುಂಜಿಗಾವಿ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ